# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಜಂಟಿ ನಿರ್ದೇಶಕರು, ಕಟ್ಟಡ ಪರವಾನಗಿ (ದಕ್ಷಿಣ) ರವರ ಕಛೇರಿ, ಎನ್.ಆರ್.ವೃತ್ತ, ಬೆಂಗಳೂರು -02.

ಸಂಖ್ಯೆ: ಜಂನಿಕಪ (ದ)/ಪ್ರಾ.ಪ/ಸನಿ/ 22 /2019-20 ದಿನಾಂಕ: 10-10-2019.

## ಭಾಗಶಃ ಪ್ರಾರಂಭಿಕ ಪ್ರಮಾಣ ಪತ್ರ

**ವಿಷಯ:** ಖಾತಾ ಸಂಖ್ಯೆ 43/13 & 14/1, ಕೆಂಚೇನಹಳ್ಳಿ, ಕೆಂಗೇರಿ ಹೋಬಳಿ, ರಾಜರಾಜೇಶ್ವರಿನಗರ ವಲಯ, ವಾರ್ಡ್ ಸಂಖ್ಯೆ 160, ಬೆಂಗಳೂರು ಇಲ್ಲಿ ನಿರ್ಮಿಸಲಾಗುತ್ತಿರುವ ಬ್ಲಾಕ್ ಬಿ, ಸಿ ಮತ್ತು ಡಿ ರ ವಸತಿ ಸಮುಚ್ಚಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಬಗ್ಗೆ.

**ಉಲ್ಲೇಖ:** 1) ಅರ್ಜಿದಾರರ ಮನವಿ ದಿನಾಂಕ: 19-09-2019.

2) ನಕ್ಷೆ ಮಂಜೂರಾತಿ ಸಂಖ್ಯೆ: BBMP/ Addl.Dir/JD South/ 0253/17-18 ದಿನಾಂಕ: 05-11-2018.

3) ಅಪರ ನಿರ್ದೇಶಕರು, ಕಟ್ಟಡ ಪರವಾನಗಿ ರವರ ಅನುಮೋದನೆ ದಿನಾಂಕ: 03-10-2019.

*****

ಖಾತಾ ಸಂಖ್ಯೆ 43/13 & 14/1, ಕೆಂಚೇನಹಳ್ಳಿ, ಕೆಂಗೇರಿ ಹೋಬಳಿ, ರಾಜರಾಜೇಶ್ವರಿನಗರ ವಲಯ, ವಾರ್ಡ್ ಸಂಖ್ಯೆ 160, ಬೆಂಗಳೂರು ಇಲ್ಲಿನ ಸ್ವತ್ತಿನಲ್ಲಿ ತಳ+ನೆಲ+ಮೇಲಿನ 33 ಅಂತಸ್ತುಗಳ 468 ಘಟಕಗಳುಳ್ಳ ವಸತಿ ಸಮುಚ್ಚಯ ಕಟ್ಟಡ ನಿರ್ಮಿಸಲು ಈ ಕಛೇರಿಯಿಂದ ಎಲ್.ಪಿ ಸಂಖ್ಯೆ: BBMP/ Addl.Dir/JD South/ 0253/17-18 ದಿನಾಂಕ: 05-11-2018 ರಂದು ನಕ್ಷೆ ಮಂಜೂರಾತಿ ನೀಡಲಾಗಿದೆ. ಉಲ್ಲೇಖ (1) ರ ಮನವಿಗೆ ಸಂಬಂಧಿಸಿದಂತೆ, ವಸತಿ ಸಮುಚ್ಚಯ ಕಟ್ಟಡದ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಸಲುವಾಗಿ ದಿನಾಂಕ: 25-09-2019 ರಂದು ಸ್ಥಳ ಪರಿಶೀಲಿಸಲಾಗಿ ಮಂಜೂರಾತಿ ನಕ್ಷೆಯನ್ವಯ ಅಗತ್ಯ ನಡುಜಾಗಗಳನ್ನು ಬಿಟ್ಟು ಆರ್.ಸಿ.ಸಿ ಕಂಬಗಳನ್ನು ನಿರ್ಮಿಸಿದ್ದು, ಸದರಿ ಪ್ರಸ್ತಾವನೆಗೆ ಉಲ್ಲೇಖ (3) ರಂತೆ ಅಪರ ನಿರ್ದೇಶಕರು, ಕಟ್ಟಡ ಪರವಾನಗಿ ರವರು ಅನುಮೋದನೆ ನೀಡಿರುತ್ತಾರೆ. ಪ್ರಾರಂಭಿಕ ಪ್ರಮಾಣ ಪತ್ರಕ್ಕೆ ಅಗತ್ಯ ಶುಲ್ಕವಾದ ರೂ. 5,69,000/-ಗಳನ್ನು ಅರ್ಜಿದಾರರಿಂದ ರಸೀದಿ ಸಂಖ್ಯೆ: RE-ifms624-TP/000094 ದಿನಾಂಕ: 10-10-2019 ರಂದು ಸಂದಾಯಿಸಿಕೊಳ್ಳಲಾಗಿದೆ. ಆದುದರಿಂದ ಸದರಿ ಸ್ವತ್ತಿನಲ್ಲಿ ನಿರ್ಮಿಸುತ್ತಿರುವ ವಸತಿ ಸಮುಚ್ಚಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತಿಗೊಳಪಡಿಸಿ ನೀಡಲಾಗಿದೆ.

1) ಕಟ್ಟಡ ಕಾಮಗಾರಿಯನ್ನು ಮಂಜೂರಾತಿ ನಕ್ಷೆಯಂತೆ ನಿಯಮಾನುಸಾರ ನಿರ್ಮಿಸತಕ್ಕದ್ದು.
2) ಕಟ್ಟಡ ನಿರ್ಮಾಣದ ಪ್ರಗತಿಯನ್ನು ಕಾಲಾನುಸಾರ ಸಂಬಂಧಪಟ್ಟ ಕಛೇರಿಗೆ ಮಾಹಿತಿಯನ್ನು ನೀಡಿ ಮಂಜೂರಾತಿ ನಕ್ಷೆಯಂತೆ ನಿರ್ಮಿಸುತ್ತಿರುವ ಬಗ್ಗೆ ಪರಿವೀಕ್ಷಣೆಗೆ ಒಳಪಡಿಸತಕ್ಕದ್ದು.
3) ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಕ್ಕ-ಪಕ್ಕದವರಿಗೆ ತೊಂದರೆಯಾಗದಂತೆ ಹಾಗೂ ಕೆಲಸಗಾರರಿಗಾಗಿ ಶೆಡ್ ಮತ್ತು ತಾತ್ಕಾಲಿಕ ಶೌಚಾಲಯಗಳನ್ನು ನಿರ್ಮಿಸತಕ್ಕದ್ದು.
4) ನಕ್ಷೆ ಮಂಜೂರಾತಿ ಪಡೆದ ದಿನಾಂಕದಿಂದ ಐದು ವರ್ಷದೊಳಗಾಗಿ ಕಟ್ಟಡದ ಕಾಮಗಾರಿಯನ್ನು ಪೂರ್ಣಗೊಳಿಸಿ ಸ್ವಾಧೀನಾನುಭವ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು.

10/10/2019

ಜಂಟಿ ನಿರ್ದೇಶಕರು ಕಟ್ಟಡ ಪರವಾನಗಿ (ದಕ್ಷಿಣ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು



Scanned by CamScanner

5) ಕಟ್ಟಡ ನಿರ್ಮಾಣ ಮತ್ತು ಕಟ್ಟಡ ತೆರವಿನ ತ್ಯಾಜ್ಯದ ನಿರ್ವಹಣೆ ಮತ್ತು ವಿಲೇವಾರಿಯನ್ನು ಮಾಡಲು ಘನತ್ಯಾಜ್ಯ ನಿರ್ವಹಣೆ (ಎಸ್.ಡಬ್ಲ್ಯೂ.ಎಂ) ಉಪನಿಯಮ 2016 ರಂತೆ ನಿರ್ವಹಿಸುವುದು.

6) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಸಂಸ್ಕರಿಸಿದ (Treated Water Utilisation for Construction) ನೀರನ್ನು ಕಟ್ಟಡ ನಿರ್ಮಾಣ ಕಾರ್ಯಕ್ಕೆ ಕಡ್ಡಾಯವಾಗಿ ಒಳಸಿಕೊಳ್ಳುವುದು.

ಸಹಿ/-
ಜಂಟಿ ನಿರ್ದೇಶಕರು, ಕಟ್ಟಡ ಪರವಾನಗಿ (ದಕ್ಷಿಣ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಗೆ

B.V. Jayalakshmi & Others
GPA Holder for M.N. Landmark
Rep by Managing Partner Sri. Arun.S
# 8, A.S. Complex, 8th Main,
Basaveshwaranagar, Bangalore.

**ಪ್ರತಿಯನ್ನು:** ಕಾರ್ಯಪಾಲಕ ಅಭಿಯಂತರರು / ಸಹಾಯಕ ಕಾರ್ಯಪಾಲಕ ಅಭಿಯಂತರರು, ರಾಜರಾಜೇಶ್ವರಿನಗರ ಉಪ ವಿಭಾಗ ರವರಿಗೆ ಮಾಹಿತಿಗಾಗಿ ಮತ್ತು ಕ್ರಮಕ್ಕಾಗಿ.

10/10/2019

ಜಂಟಿ ನಿರ್ದೇಶಕರು, ಕಟ್ಟಡ ಪರವಾನಗಿ (ದಕ್ಷಿಣ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

10/10/19 10/10/19 10/10/19



Scanned by CamScanner